ಮೇಲೆತ್ತಿ ಗಟಗಟನೇ ಬಿಸಿ ಚಹ ಕುಡಿದ ಅಸಾಧಾರಣ ರೀತಿಯನ್ನು ನೆನೆಸಿಕೊಳ್ಳುತ್ತಾನೆ. ಕಾಡುವ ಕನಸಿನಿಂದ ವ್ಯಗ್ರವಾದ ಮನಸ್ಸನ್ನು ಹತೋಟಿಗೆ ತರಲು ದಿನವಿಡೀ ಒದ್ದಾಡುತ್ತಾನೆ. ಆ ಪ್ರಕ್ರಿಯೆಯಲ್ಲಿ ತನ್ನ ವ್ಯಕ್ತಿತ್ವದ ಇನ್ನೊಂದು ಮಗ್ಗುಲು ಅವನಿಗೆ ಗೋಚರವಾಗುತ್ತ ಹೋಗುತ್ತದೆ. ಇಂಥ ಸ್ಥಿತ್ಯಂತರವನ್ನು ಸಣ್ಣ ವಿವರವೊಂದರ ಮೂಲಕ ಕಣ್ಣಿಗೆ ಕಟ್ಟುವಂತೆ ಕತೆಯು ಹಿಡಿದಿಡುತ್ತದೆ: ಸಂಜೆ ಹೆಂಡತಿಯು ಚಹ ತಂದುಕೊಟ್ಟಾಗ ಕನಸಿನಲ್ಲಿ ಕುಡಿದ ರೀತಿಯಲ್ಲಿಯೇ ಅವನು ಬಿಸಿ ಚಹದ ಕಪ್ಪು ಮೇಲೆತ್ತಿ ಗಟಗಟನೇ ಕುಡಿಯುತ್ತಾನೆ. ಅಸಾಧ್ಯವೆಂಬಂತೆ ಕಾಣಿಸಿದ ಕನಸಿನ ವಿವರವೊಂದು ವಾಸ್ತವವಾದೊಡನೆ ಹುಟ್ಟುವ ಸಂದಿಗ್ಧತೆ, ಸಂಕಟಗಳ ಹೊಸ್ತಿಲಲ್ಲಿ ಕತೆ ಮುಗಿಯುತ್ತದೆ.

ಸಮಾಜದ ಅಪೇಕ್ಷೆಗಳು, ಸುಖವೆಂದರೇನೆಂಬುದರ ಬಗ್ಗೆ ನಮ್ಮದೇ ಗ್ರಹೀತಗಳು ಹೇಗೆ ಸಂಸಾರದ ಸುಖಸಮಾಧಾನಗಳನ್ನು ಆಳಬಹುದೆನ್ನುವ ಸೂಕ್ಷ್ಮವನ್ನು ಹಿಡಿದಿಟ್ಟ ಕತೆ 'ಕತ್ತಲಿನಾಚೆ'. ಗಂಡು ಹೆಣ್ಣಿನ ಆಪ್ತ ಸಂಬಂಧಗಳಲ್ಲಿಯೂ ತಲೆಹಾಕುವ ಮಾಲಕೀ ಪ್ರವೃತ್ತಿಯ ಸುಳಿಗಳನ್ನು ಕೂಡ ಇದು ಪರಿಶೀಲಿಸುತ್ತದೆ. ಇಂಥ ವಸ್ತುಗಳನ್ನು ನಿಭಾಯಿಸುವಾಗ ಅತ್ಯಗತ್ಯವಾದ ನಿಷ್ಪಕ್ಷಪಾತವಾದ ಮನೋಸ್ಥಿತಿಯನ್ನು ಕತೆಗಾರರು ಸಾಧಿಸಿದ್ದಾರೆ. ಯಾವ ಕತೆಯೂ ಪಾತ್ರಗಳ ಸರಿತಪ್ಪುಗಳನ್ನು ತೂಗಿ ನಿರ್ಣಯಕೊಡುವ ಸ್ಥಳವಲ್ಲವೆಂಬ ಎಚ್ಚರ ಈ ಲೇಖಕರಿಗಿರುವುದನ್ನು ಸಂಕಲನದುದ್ದಕ್ಕೂ ಕಾಣಬಹುದು.

ಬರವಣಿಗೆಯಲ್ಲಿ ಕಲಾತ್ಮಕತೆಯೆನ್ನುವುದನ್ನು ಕೇವಲ ಸೌಂದರ್ಯದ ಅಭಿವ್ಯಕ್ತಿಯೆಂದು ಮಾತ್ರ ಚರ್ಚಿಸುವುದು ಸೀಮಿತ ಗ್ರಹಿಕೆಯ ಪರಿಣಾಮವಾಗಿದೆ. ಒಳಗಿನ ತುರ್ತು ಗುದ್ದಿಕೊಂಡು ಬಂದು ಮಾತು ಬೇಡಿದಾಗ, ವೈಯಕ್ತಿಕ ನೋವಿನ ಆಚೆಗೂ ನೋಡಬಲ್ಲ ಕತೆಗಾರ ತಕ್ಕ ಕಲಾಭಿವ್ಯಕ್ತಿಗಾಗಿ ಹಾತೊರೆಯುತ್ತಾನೆ. ತೀವ್ರವಾದ ಸಂಕಟವನ್ನು ಕತೆಯಾಗಿಸುವಾಗ ಅದರಲ್ಲಿ ಮನುಷ್ಯಕುಲದ ಸಹಜೀವನದ ವಿಫಲತೆಯ ಕುರಿತು ವಿಷಾದವಿದ್ದರೆ ಅಂತಹ ಕೃತಿಗಳು ವಿಶೇಷ ಸಂಕೀರ್ಣತೆಯನ್ನೂ ಒಳನೋಟಗಳನ್ನೂ ಪಡೆಯುತ್ತವೆ. ದೇವನೂರರ ಬರವಣಿಗೆಯು ಈ ಬಗೆಯದು. ಇಂತಹ ಸಮಚಿತ್ತದ, ವಿಶಾಲ ದೃಷ್ಟಿಕೋನದಿಂದ ಬದುಕನ್ನು ಕಾಣಬಲ್ಲ ಸಾಮರ್ಥ್ಯವನ್ನು ಇಲ್ಲಿಯ ಕೆಲವು ಕತೆಗಳಲ್ಲಿ ಗೊರವರ ತೋರಿಸಿದ್ದಾರೆ. ಉದಾಹರಣೆಗೆ ಬಾಲಕನೊಬ್ಬನ ವಯೋಸಹಜ ಆಸೆಯು ದುರಂತದಲ್ಲಿ ಅಂತ್ಯವಾಗುವ 'ಪೆಪ್ಪರಮಿಂಟು' ಕತೆಯ ಅಂತ್ಯದಲ್ಲಿರುವ ಘೋರ ಘಟನೆಯ ಜವಾಬ್ದಾರಿಯು ಸಾಮೂಹಿಕವೆನಿಸುತ್ತದೆ.

ತಾನು ಆಡು ಕಾಯುತ್ತಿದ್ದ ಕಾಲದ ದಿನಚರಿಯನ್ನು ದಾಖಲಿಸುವ ಮೂಲಕ ಕನ್ನಡ ಸಾಹಿತ್ಯಲೋಕವನ್ನು ಪ್ರವೇಶಿಸಿದ ಗೊರವರರ ಮೂರನೇ ಕಥಾಸಂಕಲನವಿದು. ನಮ್ಮ ಹಲವು ಹೊಸ ಕತೆಗಾರರು ವಸ್ತುವಿನ ಆಯ್ಕೆಯಲ್ಲೂ ರಾಜಕೀಯ ಸಮರ್ಪಕತೆಯ ಭಿಡೆಗೆ ಬಿದ್ದು ಆರೋಪಿತ ದುಃಖಗಳನ್ನು ವೈಯಕ್ತಿಕ ಸಂಕಟಗಳೆಂದು ಬಗೆದಿದ್ದಾರೆ. ಇಂಥ ವಾತಾವರಣದಲ್ಲಿ ತಮ್ಮ ಒಳಗಿನ ದನಿಗೆ ಕಿವಿಗೊಟ್ಟ ಗೊರವರರ ಕತೆಗಳು ಹೊಸ ಲೋಕವೊಂದನ್ನು ನೋಡಲು ಓದುಗರನ್ನು ಪ್ರೇರೇಪಿಸುತ್ತವೆ. ಈ ಸಂಕಲನದ ಮೂಲಕ ಅವರು ಕನ್ನಡದ ಸಶಕ್ತ ಕತೆಗಾರರ ಪಟ್ಟಿಯಲ್ಲಿ ಹೆಸರು ಹಚ್ಚಲು ಸಾಲಿನಲ್ಲಿ ಮುಂದೆ ನಿಂತಿದ್ದಾರೆ.

❖